**ದಿನಾಂಕ 16.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಎದುರುದಾರರ ಪರ: ಶ್ರೀ. ಐ.ಕೆ. ವಕೀಲರಿಂದಃ-**

ದಿನಾಂಕ 29.04.2016 ರಂದು ವಿವಾಹವಾಗಿದ್ದು, ದಿನಾಂಕ 15.05.2016 ರಂದು ಆರತಕ್ಷತೆ ನಡೆದಿರುತ್ತದೆ ಎಂದರೆ ಸರಿ. ಸುಮಾರು 16 ದಿನಗಳು ತಡವಾಗಿ ಆರತಕ್ಷತೆ ನಡೆಯಲು ಕಾರಣವೇನು ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಪ್ರೇಮ ವಿವಾಹ ಮಾಡಿಕೊಂಡಿದ್ದರಿಂದ ಇಬ್ಬರ ಮನೆಯಲ್ಲಿಯೂ ಮಾತುಕತೆ ನಡೆದು ನಂತರ ತಡವಾಗಿ ಆರತಕ್ಷತೆಯನ್ನು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ದಿನಾಂಕ 29.04.2016 ರಂದು ನಾನು ಬಸ್ಸಿನ ಮೂಲಕ ಬೆಂಗಳೂರಿಗೆ ಹೋಗಿರುತ್ತೇನೆ. ಸದರಿ ಸಮಯದಲ್ಲಿ 1 ನೇ ಎದುರುದಾರರು ಬೆಂಗಳೂರಿನಲ್ಲಿಯೇ ಇದ್ದರು. ನನ್ನ ಮತ್ತು 1 ನೇ ಎದುರುದಾರರ ಪ್ರೀತಿ ವಿಚಾರವಾಗಿ ನನ್ನ ತಂದೆ-ತಾಯಿ ನಮ್ಮ ವಿವಾಹಕ್ಕೆ ಸಂಬಂಧಿಸಿದಂತೆ ಬುದ್ಧಿ ಹೇಳಿರುತ್ತಾರೆ, ಆದರೆ ಯಾವುದೇ ದೂರನ್ನು ನೀಡಿರುವುದಿಲ್ಲ.

ನಾನು 1 ನೇ ಎದುರುದಾರನನ್ನು ಪ್ರೇಮ ವಿವಾಹ ಮಾಡಿಕೊಂಡ ದಿನ ಎದುರುದಾರನನ್ನು ನಾನು ಸ್ವಯಂ ಪ್ರೇರಣೆಯಿಂದ ಮದುವೆಯಾಗಿರುವುದಾಗಿ ನನ್ನಿಂದ ದಿನಾಂಕ 28.04.2016 ರಂದು ಸಂಜೆ 4.17 ಗಂಟೆಗೆ ನನ್ನಿಂದ 1 ನೇ ಎದುರುದಾರರು ಸ್ಟಾಂಪ್ ಪೇಪರ್ ಮೇಲೆ ಬರೆಸಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ತಂದೆ-ತಾಯಿಯವರು ದಿನಾಂಕ 29.04.2016 ರಂದು ಬೀರೂರು ಪೊಲೀಸ್ ಠಾಣೆಗೆ ನಮ್ಮ ಮಗಳನ್ನು ಅಕ್ರಮವಾಗಿ 1 ನೇ ಎದುರುದಾರನು ಕರೆದುಕೊಂಡು ಹೋಗಿರುತ್ತಾನೆ ಎಂದು ದೂರು ನೀಡಿದ್ದರು ಎಂಬ ಪ್ರಶ್ನೆಗೆ ಸಾಕ್ಷಿಯು ನನ್ನ ತಂದೆ-ತಾಯಿಯು ನಾನು ಕಾಣೆಯಾಗಿರುತ್ತೇನೆ ಎಂದು ದೂರನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ದೂರಿನಲ್ಲಿ 1 ನೇ ಎದುರುದಾರನ ಹೆಸರನ್ನು ನಮೂದಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

2016 ರ ನವೆಂಬರ್ ನಲ್ಲಿ ನಾನು ಗರ್ಭಿಣಿಯಾಗಿರುತ್ತೇನೆ. 2 ನೇ ಅರ್ಜಿದಾರರು ದಿನಾಂಕ 17.08.2021 ರಂದು ಕಡೂರಿನ ಸತ್ಯಸಾಯಿ ಆಸ್ಪತ್ರೆಯಲ್ಲಿ ಜನಿಸಿರುತ್ತಾರೆ ಎಂದರೆ ಸರಿ. ಹೆಗರಿಯಾಗುವ ಎರಡು ತಿಂಗಳ ಮೊದಲೇ ನಾನು 1 ನೇ ಎದುರುದಾರರ ಮನೆಯಿಂದ ನನ್ನ ತಂದೆ ಮನೆಗೆ ಹೋಗಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ

ಮುಂದುವರೆದು ನನಗೆ ಹೆರಿಗೆ ಆಗುವ 15 ದಿನಗಳ ಮೊದಲು ನನಗೆ ಸೀಮಂತ ಮಾಡಿ ನನ್ನನ್ನು ನನ್ನ ತವರು ಮನೆಗೆ ಕಳುಹಿಸಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆ–ತಾಯಿ ಸೀಮಂತಕ್ಕೆಂದು ಕಾರಿನಲ್ಲಿ ಬಂದಿದ್ದು, ಅದೇ ಕಾರಿನಲ್ಲೇ ನನ್ನ ತವರು ಮನೆಗೆ ನನ್ನನ್ನು ಹೆರಿಗೆಗಾಗಿ ಕರೆದುಕೊಂಡು ಹೋಗಿರುತ್ತಾರೆ.

ಜುಲೈ– 2017 ರಿಂದ ಏಪ್ರಿಲ್ –2022 ರವರೆಗು ನಾನು 1 ನೇ ಎದುರುದಾರರನ್ನು ಭೇಟಿಯಾಗಿರುವುದಿಲ್ಲ ಹಾಗೂ ನನ್ನ ಮಗವನ್ನು ಅವರಿಗೆ ನೋಡಲು ಅವಕಾಶ ಮಾಡಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಜೂನ್ –2016 ರಿಂದ ಜುಲೈ–2017 ರವರೆಗು ಅಂದರೆ ಒಟ್ಟು 13 ತಿಂಗಳು ನಾನು ಎದುರುದಾರರೊಂದಿಗೆ ಇದ್ದೆನು ಎಂದರೆ ಸರಿ. ಒಟ್ಟು 13 ತಿಂಗಳಲ್ಲಿ ನಾನು 07 ತಿಂಗಳು ಗರ್ಭಿಣಿಯಾಗಿದ್ದು, ಆ ಸಮಯದಲ್ಲಿ ನಾನು ನನ್ನ ಅತ್ತೆ–ಮಾವನನ್ನು ಯಾವಾಗ ಭೇಟಿ ಮಾಡಿರುತ್ತೇನೆ ಎಂದು ನನಗೆ ಈಗ ನೆನಪಿರುವುದಿಲ್ಲ. ಆ ಸಮಯದಲ್ಲಿ 1 ನೇ ಎದುರುದಾರರು ಅವರ ತಂದೆ–ತಾಯಿಯನ್ನು ನೋಡಲು ಹೋಗಿ ಬರುತ್ತಿದ್ದರು, ಯಾವ ದಿನ, ಯಾವ ತಿಂಗಳು ಹೋಗಿ ಬರುತ್ತಿದ್ದರು ಎಂದು ನನಗೆ ಈಗ ಹೇಳಲಾಗುವುದಿಲ್ಲ.

2022 ರಲ್ಲಿ 1 ನೇ ಎದುರುದಾರರು ನಮ್ಮ ಮನೆಗೆ ಬಂದು ನನ್ನನ್ನು ಹಾಗೂ ಮಗುವನ್ನು ಕರೆದುಕೊಂಡು ಹೋಗಲು ಬಂದಿದ್ದರು ಎಂದರೆ ಸರಿ. 2020 ಮತ್ತು 2021 ನೇ ಸಾಲಿನಲ್ಲಿ ಕೋವಿಡ್ ಇದ್ದುದ್ದರಿಂದ 1 ನೇ ಎದುರುದಾರರು ನನ್ನನ್ನು ಮತ್ತು ಮಗುವನ್ನು ಭೇಟಿಯಾಗಲು ಸಾಧ್ಯವಾಗಿರಲಿಲ್ಲ ಎಂದರೆ, ಸಾಕ್ಷಿಯು 2017 ರಿಂದ ಎದುರುದಾರರು ನಮ್ಮನ್ನು ನೋಡಲು ಬಂದೇ ಇರಲಿಲ್ಲ ಎಂದು ನುಡಿಯುತ್ತಾರೆ. ನನ್ನ ಮತ್ತು 1 ನೇ ಎದುರುದಾರರ ನಡುವೆ ಹಣಕಾಸಿನ ಮತ್ತು ಅಹಂಕಾರದ ವಿವಾದ ಇತ್ತು ಎಂದರೆ ಸರಿಯಲ್ಲ. ದಿನನಿತ್ಯದ ಮನೆ ವಿಷಯವನ್ನು ನನ್ನ ತಾಯಿಗೆ ತಿಳಿಸುತ್ತಿದ್ದುದ್ದರಿಂದ 1 ನೇ ಎದುರುದಾರರು ನನ್ನ ಮೇಲೆ ಕೋಪಕೊಂಡು ನಮ್ಮಿಬ್ಬರ ನಡುವೆ ಜಗಳ ಆಗುತ್ತಿತ್ತು ಎಂದರೆ ಸರಿಯಲ್ಲ.

ದಿನಾಂಕ 13.07.2023 ರಂದು ವೈಭವ್ ಮಾರ್ಟ್ ಅನ್ನು ಸ್ಥಾಪಿಸಲಾಗಿರುತ್ತದೆ ಎಂದರೆ, ಸಾಕ್ಷಿಯು ವೈಭವ್ ಮಾರ್ಟ್ ಅನ್ನು ನನ್ನ ಒಡವೆಗಳನ್ನು ಇಟ್ಟು ಶುರು ಮಾಡಲಾಗಿರುತ್ತದೆ, ಆದರೆ ದಿನಾಂಕ, ವರ್ಷ ಮರೆತು ಹೋಗಿರುತ್ತದೆ. ನನ್ನ

ಒಪ್ಪಿಗೆಯಿಂದಲೇ ಒಡವೆಗಳನ್ನು ಅಡಇಟ್ಟು 1 ನೇ ಎದುರುದಾರರು ಹಣವನ್ನು ತೆಗೆದುಕೊಂಡಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು 1 ನೇ ಎದುರುದಾರರು ಮೊದಲು ನನ್ನ ಖಾತೆಯಲ್ಲಿ ನನ್ನ ಒಡವೆಗಳನ್ನು ಅಡವಿಟ್ಟು ಹಣ ತೆಗೆದುಕೊಳ್ಳುವುದಾಗಿ ಕರೆದುಕೊಂಡು ಹೋಗಿ ನಂತರ ಎದುರುದಾರನ ಖಾತೆಗೆ ನನ್ನ ಒಡವೆಗಳನ್ನು ರೂ.3 ಲಕ್ಷದಷ್ಟು ಅಡವಿಟ್ಟು ನನ್ನ ಖಾತೆಯಲ್ಲಿ ರೂ.30,000/-ದಷ್ಟು ಅಡವಿಟ್ಟು ಹಣವನ್ನು ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ಈ ನನ್ನ ಹೇಳಿಕೆಗೆ ಸಂಬಂಧಿಸಿದಂತೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ, ನನ್ನ ಬಳಿ ಇರುತ್ತವೆ ಎಂದು ನುಡಿಯುತ್ತಾರೆ.

ನಾನು ವೈಭವ್ ಮಾರ್ಟ್ ನ ಮಾಲೀಕಳಾಗಿದ್ದು, ಸದರಿ ಮಾರ್ಟ್ ಅನ್ನು ನಾನು ನಡೆಸಿಕೊಂಡು ಹೋಗುತ್ತಿದ್ದೆ ಎಂಬ ಪ್ರಶ್ನೆಗೆ ಸಾಕ್ಷಿಯು ವೈಭವ್ ಮಾರ್ಟ್ ನ ಮಾಲೀಕಳಾಗಿರಲಿಲ್ಲ, ಆದರೆ ಅಂಗಡಿಯನ್ನು ನೋಡಿಕೊಳ್ಳಲು ಹೋಗುತ್ತಿದ್ದೆ ಎಂದು ನುಡಿಯುತ್ತಾರೆ. ನಾನು ಮನೆಯಲ್ಲಿ ಖಾಲಿ ಕೈಯಲ್ಲಿ ಕುಳಿತ್ತಿದ್ದರಿಂದ ನನ್ನ ಗಂಡ ನನಗೋಸ್ಕರ ವೈಭವ್ ಮಾರ್ಟ್ ಅನ್ನು ಸ್ಥಾಪಿಸಿಕೊಟ್ಟಿದ್ದರು ಎಂದರೆ ಸರಿಯಲ್ಲ. ವೈಭವ್ ಮಾರ್ಟ್ ಗೆ ಸಂಬಂಧಿಸಿದ ಸ್ಟಾಕ್ ಮತ್ತು ಗೂಡ್ಸ್ ಗಳನ್ನು ನಾನೇ ತರಿಸುತ್ತಿದ್ದೆನು ಎಂದರೆ ಸರಿಯಲ್ಲ, ಅದನ್ನು 1 ನೇ ಎದುರುದಾರರೇ ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ವೈಭವ್ ಮಾರ್ಟ್ ಅನ್ನು ಸ್ಥಾಪಿಸಿದ ನಂತರ ವೈಭವ್ ಮಾರ್ಟ್ ಈಗ ಏನಾಗಿರುತ್ತದೆ ಎಂದು ನನಗೆ ತಿಳಿದಿರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು 1 ನೇ ಎದುರುದಾರರು ನನ್ನನ್ನು ಹೊಡೆದು ಕಳುಹಿಸಿದ್ದರಿಂದ ಸದರಿ ಅಂಗಡಿ ಏನಾಯಿತು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಯಾವ ವರ್ಷ ನನಗೆ 1 ನೇ ಎದುರುದಾರರು ಹೊಡೆದು ಕಳುಹಿಸಿರುತ್ತಾರೆ ಎಂದು ನನಗೆ ಈಗ ಮರೆತು ಹೋಗಿರುತ್ತದೆ. ನನಗೆ 1 ನೇ ಎದುರುದಾರರು ಹೊಡೆದಿರುವ ಬಗ್ಗೆ ನಾನು ದೂರನ್ನು ನೀಡಿರುವುದಿಲ್ಲ, ಆದರೆ 1 ನೇ ಎದುರುದಾರರು ನಮ್ಮ ಮನೆಯ ಬಳಿ ಬಂದು ಜಗಳ ಮಾಡಿದಾಗ ದೂರನ್ನು ನೀಡಲಾಗಿರುತ್ತದೆ.

ದಿನಾಂಕ 24.04.2023 ರಂದು ನಾನು ಬೆಂಗಳೂರಿನ ಹೆಬ್ಬಾಳ ಪೊಲೀಸ್ ಠಾಣೆಗೆ ದೂರನ್ನು ನೀಡಿದ್ದೆ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಹೆಬ್ಬಾಳ ಪೊಲೀಸ್ ಠಾಣೆಗೆ ದೂರನ್ನು ನೀಡಿರುತ್ತೇನೆ, ಆದರೆ ದಿನಾಂಕ ಮತ್ತು ವರ್ಷ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ.

ಹೆಬ್ಬಾಳ ಪೊಲೀಸ್ ಠಾಣೆಗೆ ದೂರನ್ನು ನೀಡಿದ ನಂತರ ವೈಭವ್ ಮಾರ್ಟ್ ಅನ್ನು ದಿನಾಂಕ 01.07.2023 ರಂದು ಸ್ಥಾಪಿಸಲಾಗಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ಹೆಬ್ಬಾಳ ಪೊಲೀಸ್ ಠಾಣೆಗೆ ದೂರನ್ನು ನೀಡಿದ ನಂತರ 1 ನೇ ಎದುರದಾರರು ನನ್ನೊಂದಿಗೆ ರಾಜಿ ಮಾಡಿಕೊಂಡು ಕರೆದುಕೊಂಡು ಹೋಗಿದ್ದು, ತದನಂತರ ವೈಭವ್ ಮಾರ್ಟ್ ಅನ್ನು ಸ್ಥಾಪಿಸಲಾಗಿರುತ್ತದೆ ಎಂದು ನುಡಿಯುತ್ತಾರೆ.

ನನ್ನ ಅತ್ತೆ, ಮಾವ, ಮೈದುನ ಮತ್ತು ನನ್ನ ಗಂಡನ ವಿರುದ್ಧ ವರದಕ್ಷಿಣೆ ಕಿರುಕುಳ ನೀಡುತ್ತಿದ್ದಾರೆ ಎಂದು ಬೀರೂರು ಪೊಲೀಸ್ ಠಾಣೆಗೆ ದೂರನ್ನು ನೀಡಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ವೈಭವ್ ಮಾರ್ಟ್ ಸ್ಥಾಪನೆಯ ಪೂರ್ವದಲ್ಲಿ ದೂರು ನೀಡಿರುತ್ತೇನೆ. ನಾವು ರಾಜಿ ಮಾಡಿಕೊಂಡ ನಂತರ ಬೀರೂರು ಪೊಲೀಸ್ ಠಾಣೆಗೆ ನೀಡಿದ ದೂರನ್ನು ಏಕೆ ಹಿಂಪಡೆದುಕೊಂಡಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಜೀವನಾಂಶದ ಪ್ರಕರಣವನ್ನು ರಾಜಿಯಂತೆ ಹಿಂತೆಗೆದುಕೊಂಡಿದ್ದು ಕ್ರಿಮಿನಲ್ ಪ್ರಕರಣದಲ್ಲಿ ಸಮನ್ಸ್ ಬಂದ ನಂತರ ಬರುವುದಾಗಿ ತಿಳಿಸಿದ್ದರಿಂದ ಕ್ರಿಮಿನಲ್ ಪ್ರಕರಣವನ್ನು ಹಿಂಪಡೆದಿರುವುದಿಲ್ಲ ಎಂದು ನುಡಿಯುತ್ತಾರೆ.

ದಿನಾಂಕ 26.12.2024 ರಂದು ಪುನಃ ಎದುರುದಾರರ ಮೇಲೆ ಜೀವನಾಂಶ ಕೋರಿ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿ. ದಿನಾಂಕ 14.12.2023 ರಂದು ಯಗಟಿ ಪೊಲೀಸ್ ಠಾಣೆಗೆ 1 ನೇ ಎದುರುದಾರರ ವಿರುದ್ಧ ದೂರನ್ನು ನೀಡಿರುತ್ತೇನೆ ಎಂಬ ಪ್ರಶ್ನೆಗೆ ಮೊದಲು 1 ನೇ ಎದುರುದಾರರು ಯಗಟಿ ಪೊಲೀಸ್ ಠಾಣೆಗೆ ನನ್ನ ವಿರುದ್ಧ ದೂರನ್ನು ನೀಡಿದ್ದು, ಸದರಿ ವಿಚಾರವಾಗಿ ಪೊಲೀಸರು ನನ್ನನ್ನು ಕರೆಸಿದ್ದು, ತದನಂತರ ನಾನು ಎದುರುದಾರನ ದೂರನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು 1 ನೇ ಎದುರುದಾರನ ವಿರುದ್ಧ ಜೀವನಾಂಶಕ್ಕಾಗಿ ಎರಡು ಅರ್ಜಿಗಳನ್ನು ಮತ್ತು ಒಂದು ಕ್ರಿಮಿನಲ್ ಪ್ರಕರಣವನ್ನು ಮತ್ತು ಮೂರು ಎನ್.ಸಿ.ಆರ್. ಪ್ರಕರಣಗಳನ್ನು ದಾಖಲಿಸಲಾಗಿರುತ್ತದೆ ಎಂದರೆ, ಸಾಕ್ಷಿಯು ಜೀವನಾಂಶಕ್ಕಾಗಿ ಸಲ್ಲಿಸಿದ ಒಂದು ಅರ್ಜಿ ರಾಜಿ ಮಾಡಿಕೊಂಡಿದ್ದು, ಉಳಿದವು ಬಾಕಿ ಇರುತ್ತವೆ ಎಂದು ನುಡಿಯುತ್ತಾರೆ.

ನಾನು 1 ನೇ ಎದುರುದಾರನೊಂದಿಗೆ ಜೊತೆಗೆ ಇದ್ದ ಮತ್ತು ದೂರ ಉಳಿದ ದಿನಾಂಕಗಳ ಬಗ್ಗೆ ನನ್ನ ಅರ್ಜಿಯಲ್ಲಿ ನಮೂದಿಸಲಾಗಿರುತ್ತದೆಯೇ ಎಂಬ ಪ್ರಶ್ನೆಗೆ ದಿನಾಂಕಗಳನ್ನು ನಮೂದಿಸಿರುವುದಿಲ್ಲ, ತಿಂಗಳುಗಳನ್ನು ನಮೂದಿಸಿರುತ್ತೇನೆ ಎಂದು

ನುಡಿಯುತ್ತಾರೆ. ಈ ಅರ್ಜಿಯನ್ನು ಸಲ್ಲಿಸುವ ಪೂರ್ವದಲ್ಲಿ ನಾನು1 ನೇ ಎದುರುದಾರನ ಮನೆಯಿಂದ ಯಾವ ದಿನಾಂಕದಂದು ಬಂದಿರುತ್ತೇನೆಂದು ನನಗೆ ನೆನಪಿರುವುದಿಲ್ಲ. ಸಾಕ್ಷಿಗೆ ನೀವೇ 1 ನೇ ಎದುರುದಾರರ ಮನೆಯಿಂದ ಬಂದಿದ್ದೀರಾ ಅಥವಾ 1 ನೇ ಎದುರುದಾರರೇ ನಿಮ್ಮನ್ನು ಕರೆದುಕೊಂಡು ಬಂದು ಬಿಟ್ಟು ಹೋಗಿರುತ್ತಾರಾ ಎಂಬ ಪ್ರಶ್ನೆಗೆ ಸಾಕ್ಷಿಯು ಎದುರುದಾರರು ನನ್ನನ್ನು ಹೊಡೆದು ಅಲ್ಲಿಂದ ಬೆಂಗಳೂರಿನಿಂದ ಕಳುಹಿಸಿರುತ್ತಾರೆ, ನಾನು ಎದುರುದಾರರ ಹಳ್ಳಿಯ ಮನೆಗೆ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಅಂಶಗಳನ್ನು ನಾನು ನನ್ನ ಅರ್ಜಿಯಲ್ಲಿ ತಿಳಿಸಿರುವುದಿಲ್ಲ.

ನಾನು 1 ನೇ ಎದುರುದಾರರಿಂದ ಬೇರ್ಪಟ್ಟಿದ್ದು, ನಾನು ಪದೇ-ಪದೇ 1 ನೇ ಎದುರುದಾರರೊಂದಿಗೆ ಜಗಳವಾಡುತ್ತಿದ್ದುದ್ದರಿಂದ 2 ನೇ ಅರ್ಜಿದಾರರ ಭವಿಷ್ಯದ ಮೇಲೆ ಪರಿಣಾಮ ಬೀರಿ 2 ನೇ ಅರ್ಜಿದಾರರು ಸಂತೋಷವಾಗಿರುವುದಿಲ್ಲ ಆದ್ದರಿಂದಲೇ ಈ ಅರ್ಜಿಯನ್ನು ಸಲ್ಲಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನನಗೆ ಮತ್ತು 2 ನೇ ಅರ್ಜಿದಾರರಿಗೆ ಸಂಬಂಧಿಸಿದ ಖರ್ಚು ಮತ್ತು ವೆಚ್ಚಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನನ್ನ ಆಸ್ತಿ ಮತ್ತು ಹೊಣೆಗಾರಿಕೆ ದಾಖಲೆಯಲ್ಲಿ ನಮೂದಿಸಿರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಒಟ್ಟಾಗಿ ಸೇರಿಸಿ ನಮೂದಿಸಿರುತ್ತೇನೆ ಎಂದು ನುಡಿಯುತ್ತಾರೆ.

ನನಗೆ ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್ ಮತ್ತು ಇನಿಸ್ಟಾಗ್ರಾಮ್ ನಲ್ಲಿ ನನ್ನ ಖಾತೆ ಇರುತ್ತದೆ. ನನಗೆ ಮತ್ತು 2 ನೇ ಅರ್ಜಿದಾರರಿಗೆ ತಿಂಗಳಿಗೆ ಎಷ್ಟು ಖರ್ಚುಗಳು ಬರುತ್ತದೆ ಎಂದು ನಾನು ನನ್ನ ಅರ್ಜಿಯಲ್ಲಿ ತಿಳಿಸಿರುತ್ತೇನೆ. ಅದಕ್ಕೆ ಸಂಬಂಧಿಸಿದಂತಹ ರಶೀದಿಗಳನ್ನು ನಾನು ಹಾಜರುಪಡಿಸಿರುವುದಿಲ್ಲ. ನನ್ನ ತವರು ಮನೆಯಿಂದ 1 ನೇ ಎದುರುದಾರರಿಗೆ ಒಟ್ಟು ಅಂದರೆ 50 ಗ್ರಾಂ ಚಿನ್ನ, 01 ಬ್ರಾಸ್‌ಲೇಟ್ ಮತ್ತು 01 ಉಂಗುರವನ್ನು ನೀಡಿರುವುದಾಗಿ ನನ್ನ ಅರ್ಜಿಯಲ್ಲಿ ತಿಳಿಸಿರುತ್ತೇನೆ ಎಂದರೆ ಸರಿ. ಅದಕ್ಕೆ ಸಂಬಂಧಿಸಿದಂತೆ ನಾನು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ.

ಹಿರೇನಲ್ಲೂರಿನ ಕೆನರಾ ಬ್ಯಾಂಕ್ ನಲ್ಲಿ ನನಗೆ ಸಂಬಂಧಿಸಿದ ಖಾತೆ ಇರುತ್ತದೆ. ನನ್ನ ಕೆನರಾ ಬ್ಯಾಂಕ್ ಖಾತೆಯಲ್ಲಿ ರೂ.2,09,492/- ಠೇವಣಿ ಇರುತ್ತದೆ ಎಂದರೆ ಸರಿಯಲ್ಲ. ನನಗೆ ಕಾರು ಮತ್ತು ಬೈಕನ್ನು ಚಲಾಯಿಸಲು ಬರುವುದಿಲ್ಲ ಎಂದರೆ, ಸಾಕ್ಷಿಯು ನಾನು ಕಲಿತಿರುತ್ತೇನೆ ಎಂದು ನುಡಿಯುತ್ತಾರೆ. 2023 ರಿಂದ ನಾನು 2 ನೇ ಅರ್ಜಿದಾರರೊಂದಿಗೆ

ಯಾವುದಾದರು ಪ್ರವಾಸವನ್ನು ಕೈಗೊಂಡಿದ್ದೀರಾ ಎಂಬ ಪ್ರಶ್ನೆಗೆ ನಾನು ಮತ್ತು 2 ನೇ ಅರ್ಜಿದಾರರು ಪ್ರತ್ಯೇಕವಾಗಿ ಹೋಗಿರುವುದಿಲ್ಲ, ನಮ್ಮ ಕುಟುಂಬದವರೊಂದಿಗೆ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ನಮ್ಮ ಪ್ರವಾಸದ ಖರ್ಚನ್ನು ನಮ್ಮ ಕುಟುಂಬದವರು ಭರಿಸಿರುತ್ತಾರೆ ಎಂದು ನುಡಿಯುತ್ತಾರೆ.

1 ನೇ ಎದುರುದಾರನಿಗೆ ಮಾನಸಿಕ ಖಾಯಿಲೆ ಇರುತ್ತದೆ ಎಂದರೆ ಸರಿಯಲ್ಲ. ನಿಮಗೆ ಯಾವುದಾದರು ಮಾನಸಿಕ ಖಾಯಿಲೆ ಇದೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಯಾವುದೇ ಮಾನಸಿಕ ಖಾಯಿಲೆ ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನು 1 ನೇ ಎದುರುದಾರರೊಂದಿಗೆ ಸಣ್ಣ-ಪುಟ್ಟ ವಿಚಾರಕ್ಕೆ ಜಗಳವಾಡಿ ಮಧ್ಯರಾತ್ರಿ ಮನೆಯಿಂದ ಆಚೆ ಬಂದು ಹೊರಗೆ ಮಲಗುತ್ತಿದ್ದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 1 ನೇ ಎದುರುದಾರರೇ ನನ್ನನ್ನು ಹೊಡೆದು ಮನೆಯಿಂದ ಆಚೆ ಹಾಕಿ ಹೊರಗೆ ಮಲಗುವಂತೆ ಮಾಡಿ ಅವರೇ ಫೋಟೋ ತೆಗೆದು ಎಲ್ಲಾ ಕಡೆ ಪ್ರಚಾರ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ವಿಚಾರಗಳನ್ನು ನಾನು ನನ್ನ ದೂರಿನಲ್ಲಿ ಮತ್ತು ಅರ್ಜಿಯಲ್ಲಿ ತಿಳಿಸಿರುವುದಿಲ್ಲ.

ನನಗೂ ಮತ್ತು 2 ನೇ ಅರ್ಜಿದಾರರಿಗೂ ಈಗ ಜೀವನಕ್ಕೆ ಅತ್ಯವಶ್ಯಕವಾದ ಮನೆ ಮತ್ತು ಆಹಾರದ ಕುರಿತು ಕೊರತೆ ಇರುತ್ತದೆ ಎಂದರೆ ಸರಿ. ಈಗ ನಾನು ನನ್ನ ತವರು ಮನೆಯಾದ ಕಾಮನಕೆರೆಯಲ್ಲಿ ನನ್ನ ತಂದೆ-ತಾಯಿ, ನನ್ನ ಸಹೋದರನ ಜೊತೆಗೆ ವಾಸವಿರುತ್ತೇನೆ ಎಂದರೆ ಸರಿ. ನಾನು ಲಿಂಗಾಯತ ಜಾತಿಯ ನೊಳಂಬ ಜನಾಂಗಕ್ಕೆ ಸೇರಿದವರಾಗಿದ್ದು, 1 ನೇ ಎದುರುದಾರರು ಸಾದು ಲಿಂಗಾಯಿತ ಜಾತಿಯ ಪಂಗಡಕ್ಕೆ ಸೇರಿದವರು ಎಂದರೆ ಸರಿ.

ನಾನು ಬಿ.ಎಸ್ಸಿ ಪದವಿಯನ್ನು ಮುಗಿಸಿರುತ್ತೇನೆ. ನಾನು ಇಂಗ್ಲೀಷ್ ಮತ್ತು ಕನ್ನಡ ಭಾಷೆಯಲ್ಲಿ ಪರಿಣಿತಳಾಗಿರುತ್ತೇನೆ ಎಂದರೆ, ನನಗೆ ಕನ್ನಡ ಭಾಷೆ ಚೆನ್ನಾಗಿ ಬರುತ್ತದೆ ಎಂದು ನುಡಿಯುತ್ತಾರೆ. ನಾನು ನನ್ನ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದಂತೆ ಕೆಲಸಕಾಗ್ಗಿ ಹಲವಾರು ಕಂಪನಿಗಳಲ್ಲಿ ಅರ್ಜಿಗಳನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಎದುರುದಾರರು ಡಿಪ್ಲೋಮ ಲ್ಯಾಬ್ ಟೆಕ್ನಿಷಿಯನ್ ವಿದ್ಯಾಭ್ಯಾಸ ಮಾಡಿರುತ್ತಾರೆ ಎಂದರೆ ಸರಿ. True Medics ನಲ್ಲಿ ಎದುರುದಾರರು ಕೆಲಸವನ್ನು ಬಿಟ್ಟಿರುವ ವಿಚಾರ ನನಗೆ ತಿಳಿದಿರುವುದಿಲ್ಲ.

1 ನೇ ಎದುರುದಾರರು ಈಗ ಏನು ಕೆಲಸ ನಿರ್ವಹಿಸುತ್ತಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

2 ನೇ ಅರ್ಜಿದಾರರಿಗೆ ನಾನು ಉತ್ತಮ ವಿದ್ಯಾಭ್ಯಾಸ ನೀಡುತ್ತಿಲ್ಲ, ಉತ್ತಮ ಶಾಲೆಯಲ್ಲಿ ಓದಿಸುತ್ತಿಲ್ಲ ಮತ್ತು ಶಾಲಾ ಶುಲ್ಕವನ್ನು ಕಟ್ಟಲು ಸಹ ನಾನು ಅಸಮರ್ಥಳಾಗಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನನ್ನ ತಂದೆಯನ್ನು ಕೇಳಿ 2 ನೇ ಅರ್ಜಿದಾರರಿಗೆ ಗುರುಕುಲ ಶಾಲೆಗೆ ಸೇರಿಸಿರುತ್ತೇನೆ ಎಂದು ನುಡಿಯುತ್ತಾರೆ. 2 ನೇ ಅರ್ಜಿದಾರರು ಶಾಲೆಗೆಹೋಗುತ್ತಿರುವ ಬಗ್ಗೆ ಆಗಲಿ, ಆತನಿಗೆ ಶುಲ್ಕ ಪಾವತಿಸಿದ ಬಗ್ಗೆ ಆಗಲಿ ನನ್ನ ಅರ್ಜಿಯಲ್ಲಿ ತಿಳಿಸಿರುವುದಿಲ್ಲ ಮತ್ತು ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮಗನಾದ 2 ನೇ ಅರ್ಜಿದಾರರಿಗೆ ಸಂಬಂಧಿಸಿದ ಶಾಲಾ ಖರ್ಚಿಗೆ ಸಂಬಂಧಿಸಿದಂತೆ ಯಾವುದೇ ದಾಖಲಾತಿಗಳನ್ನು 1 ನೇ ಎದುರುದಾರರಿಗೆ ತಿಳಿಸಿರುವುದಿಲ್ಲ ಮತ್ತು ನೀಡಿರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು 1 ನೇ ಎದುರುದಾರರು ನನ್ನೊಂದಿಗೆ ಮಾತನಾಡುತ್ತಿರುವುದಿಲ್ಲ ಮತ್ತು ನಮ್ಮನ್ನು ತಿರಸ್ಕರಿಸಿರುವುದರಿಂದ ನಾನು ಹೇಗೆ ಅವರಿಗೆ ದಾಖಲಾತಿಗಳನ್ನು ಕೊಡಲು ಸಾಧ್ಯ ಎಂದು ನುಡಿಯುತ್ತಾರೆ.

ನನಗೆ ಸಂಬಂಧಿಸಿದಂತೆ ಯಾವುದೇ ಬ್ಯಾಂಕಿನಲ್ಲಿ ಸಾಲ ಇರುವುದಿಲ್ಲ ಮತ್ತು ಇತರರೊಂದಿಗೆ ಸಾಲ ಇಟ್ಟುಕೊಂಡಿರುವುದಿಲ್ಲ ಎಂದರೆ ಸರಿ. ನನ್ನ ಹೆಸರಿನಲ್ಲಿ ಬ್ಯಾಂಕಿನಲ್ಲಿ ಯಾವುದೇ ಒಡವೆಗಳನ್ನು ಈಗ ಅಡವಿಟ್ಟುರುವುದಿಲ್ಲ ಎಂದರೆ, ಸಾಕ್ಷಿಯು 1 ನೇ ಎದುರುದಾರರೊಂದಿಗೆ ರೂ.30,000/- ಒಡವೆಯನ್ನು ಅಡ ಇಟ್ಟಿರುವುದನ್ನು ನಾನು ನನ್ನ ಅಣ್ಣನೊಂದಿಗೆ ಹೋಗಿ ಬಿಡಿಸಿಕೊಂಡು ಬಂದಿರುತ್ತೇನೆ, ತದನಂತರೆ ನನ್ನ ಹೆಸರಿನಲ್ಲಿ ಯಾವುದೇ ಒಡವೆಯನ್ನು ಅಡವಿಟ್ಟುರುವುದಿಲ್ಲ ಎಂದು ನುಡಿಯುತ್ತಾರೆ. 1 ನೇ ಎದುರುದಾರರು ನಮ್ಮ ಕುಟುಂಬಕ್ಕೆ ತಕ್ಕವನಾಗಿರುವುದಿಲ್ಲವೆಂದು ಆತನನ್ನು ಬಿಟ್ಟು ಬರುವಂತೆ ನನ್ನ ತಂದೆ-ತಾಯಿಯವರು ನನಗೆ ಪ್ರೇರೇಪಿಸಿರುತ್ತಾರೆ ಎಂದರೆ ಸರಿಯಲ್ಲ.

1 ನೇ ಎದುರುದಾರರು ನನ್ನೊಂದಿಗೆ ಕ್ರೂರತೆಯಿಂದ ನಡೆದುಕೊಂಡಿರುತ್ತಾರೆ ಅಂದರೆ ಹೊಡೆಯುವುದು, ಅವಾಚ್ಯ ಶಬ್ದಗಳಿಂದ ಬೈಯುವುದು ಮಾಡಿರುತ್ತಾರೆ. ನಾನು 1 ನೇ ಎದುರುದಾರನೊಂದಿಗೆ ಈಗ ಜೀವನ ನಡೆಸಲು ತಯಾರು ಇರುವುದಿಲ್ಲ ಮತ್ತು ಇಚ್ಛಿಸುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಈಗಾಗಲೇ 1 ನೇ ಎದುರುದಾರನೊಂದಿಗೆ

ರಾಜಿ ಮಾಡಿಕೊಂಡು ಜೀವನ ನಡೆಸಲು ಹೋಗಿದ್ದು, ನನ್ನ ಮೇಲೆ ಎರಡು ಬಾರಿ ಜೀವ ಬೆದರಿಕೆ ಹಾಕಿರುವುದರಿಂದ ನಾನು ಹೋಗಲು ಇಚ್ಚಿಸುವುದಿಲ್ಲ ಎಂದು ನುಡಿಯುತ್ತಾರೆ. ನಾನು ಸದರಿ ಅಂಶಗಳನ್ನು ಯಗಟಿ ಪೊಲೀಸ್ ಠಾಣೆಗೆ ದೂರು ನೀಡಿದಾಗ ಹೇಳಿರುತ್ತೇನೆ. ನಾನು 1 ನೇ ಎದುರುದಾರನ ವಿರುದ್ಧ ವಿವಾಹ ವಿಚ್ಛೇದನ ಕೋರಿ ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ.

ನನಗೆ 1 ನೇ ಎದುರುದಾರನು ಬಂದು ಜೀವನ ನಡೆಸಬೇಕು ಎಂದು ಇಬ್ಬರು ವಕೀಲರ ಮೂಲಕ ನೋಟೀಸನ್ನು ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಎದುರುದಾರನು 2 ನೇ ಅರ್ಜಿದಾರರನ್ನು ತನ್ನ ಸುಪರ್ದಿಗೆ ನೀಡಬೇಕೆಂದು ಯಾವುದೇ ಅರ್ಜಿಯನ್ನು ನೀಡಿರುವುದಿಲ್ಲ. ನಾನು ಕಾಲೇಜಿಗೆ ಹೋಗುವಾಗ ಕಾರಿನಲ್ಲಿ ಹೋಗುತ್ತಿದ್ದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಬಸ್ಸಿನಲ್ಲಿ ಹೋಗುತ್ತಿದ್ದೆ ಎಂದು ನುಡಿಯುತ್ತಾ. ನಾನು ಕಾಲೇಜಿಗೆ ಹೋಗುವಾಗ ಹಾಸ್ಟೆಲಿನಲ್ಲಿ ಉಳಿದುಕೊಂಡಿರುವುದಿಲ್ಲ ಎಂದರೆ ಸರಿ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಎಲ್ಲಾ ದಾಖಲಾತಿಗಳು ಎದುರುದಾರನ ಹೆಸರಿನಲ್ಲಿ ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರ ತಂದೆ–ತಾಯಿ ಹೆಸರಿನಲ್ಲಿ ಆಸ್ತಿಗಳು ಇದ್ದು, ಅವು ವಿಭಾಗ ಆಗಿರುವುದಿಲ್ಲ ಎಂದು ನುಡಿಯುತ್ತಾರೆ.

ನನ್ನ ಮತ್ತು 1 ನೇ ಎದುರುದಾರನ ಆರತಕ್ಷತೆಗಾಗಿ ನನ್ನ ಮನೆಯವರು ಲಕ್ಷಾಂತರ ಹಣ ಖರ್ಚು ಮಾಡಿರುವುದಾಗಿ ತಿಳಿಸಿದ್ದು, ಆದರೆ ಎಷ್ಟು ಲಕ್ಷ ಖರ್ಚಾಗಿರುವುದೆಂದು ನನ್ನ ಅರ್ಜಿಯಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ತಂದೆ ಖರ್ಚು ಮಾಡಿರುತ್ತಾರೆ, ಆದರೆ ಎಷ್ಟು ಖರ್ಚಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ನನ್ನ ಅರ್ಜಿಯಲ್ಲಿ 1 ನೇ ಎದುರುದಾರರ ತಂದೆ–ತಾಯಿ 1 ನೇ ಎದುರುದಾರನಿಗೆ ವರದಕ್ಷಿಣೆ ಹಣವನ್ನು ತೆಗೆದುಕೊಂಡು ಬರುವಂತೆ ತಿಳಿಸುತ್ತಿದ್ದರು ಎಂದು ನಿಮಗೆ ಹೇಗೆ ಗೊತ್ತು ಎಂಬ ಪ್ರಶ್ನೆಗೆ ಸಾಕ್ಷಿಯು 1 ನೇ ಎದುರುದಾರನು ಸದರಿ ವಿಚಾರಗಳನ್ನು ನನ್ನೊಂದಿಗೆ ಬಂದು ತಿಳಿಸಿ ವರದಕ್ಷಿಣೆ ಹಣವನ್ನು ಕೇಳುತ್ತಿದ್ದರು ಎಂದು ನುಡಿಯುತ್ತಾರೆ.

2 ನೇ ಅರ್ಜಿದಾರರ ಖರ್ಚು–ವೆಚ್ಚಗಳಿಗೆ ಸಂಬಂಧಿಸಿದಂತೆ ನನ್ನ ತಂದೆ–ತಾಯಿ

ನೋಡಿಕೊಳ್ಳುತ್ತಿದ್ದಾರೆ ಎಂದು ನಾನು ಅರ್ಜಿಯಲ್ಲಿ ತಿಳಿಸಿದ್ದು, ಅದಕ್ಕೆ ಸಂಬಂಧಿಸಿದಂತೆ ನಾನು ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. 1 ನೇ ಎದುರುದಾರನ ತಂದೆ–ತಾಯಿ ಬೆಂಗಳೂರಿಗೆ ಬಂದಾಗಲೂ ವರದಕ್ಷಿಣೆ ಕೇಳುತ್ತಿದ್ದರು ಎಂದು ನನ್ನ ಅರ್ಜಿಯಲ್ಲಿ ತಿಳಿಸಿದ್ದು, ಅದು ಯಾವ ವರ್ಷ, ದಿನಾಂಕ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಈಗ ಮರೆತು ಹೋಗಿರುತ್ತದೆ ಎಂದು ನುಡಿಯುತ್ತಾರೆ. 1 ನೇ ಎದುರುದಾರನಿಗೆ ಕಾರನ್ನು ಕೊಡಿಸಿದ ನಂತರವೂ ವರದಕ್ಷಿಣೆ ತರುವಂತೆ ನನಗೆ ಪೀಡಿಸುತ್ತಿದ್ದರು ಎಂದು ನನ್ನ ಅರ್ಜಿಯಲ್ಲಿ ತಿಳಿಸಿದ್ದು, ಅದು ಯಾವ ದಿನ, ವರ್ಷ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಈಗ ಮರೆತು ಹೋಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಅರ್ಜಿಯಲ್ಲಿ 1 ನೇ ಎದುರುದಾರನು ತಾನು ಬೇರೊಂದು ಮದುವೆಯಾಗುವುದಾಗಿ ಹೆದರಿಸುತ್ತಿದ್ದರು ಎಂದು ನಾನು ನನ್ನ ಅರ್ಜಿಯಲ್ಲಿ ತಿಳಿಸಿದ್ದು, ಅದು ಯಾವ ದಿನ, ವರ್ಷ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಈಗ ಮರೆತು ಹೋಗಿರುತ್ತದೆ ಎಂದು ನುಡಿಯುತ್ತಾರೆ.

ನಾನು ಬಿ.ಎಸ್ಸಿ ಪದವಿಯನ್ನು ಯಾವಾಗ ಮುಗಿಸಿರುತ್ತೇನೆ ಎಂದು ನನಗೆ ನೆನಪಿಲ್ಲ. ನಾನು ಪದವಿಯನ್ನು ಮಾಡಿದ್ದರೂ ಸಹ ಏಕೆ ಕೆಲಸಕ್ಕೆ ಹೋಗುತ್ತಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಯಾವುದೇ ಅನುಭವ ಇರುವುದಿಲ್ಲ, ಎಲ್ಲಿಯಾದರೂ ಕೆಲಸಕ್ಕೆ ಕೇಳಿದರೆ ಅನುಭವವನ್ನು ಕೇಳುತ್ತಾರೆ ಹಾಗೂ ನನ್ನ ಮಗ ಚಿಕ್ಕವನಿದ್ದರಿಂದ ಆತನನ್ನು ನೋಡಿಕೊಂಡು ಮನೆಯಲ್ಲಿಯೇ ಇರುತ್ತೇನೆ ಎಂದು ನುಡಿಯುತ್ತಾರೆ. ನೀವು ಎಲ್ಲಿಯಾದರು ಕೆಲಸಕ್ಕಾಗಿ ಅರ್ಜಿಯನ್ನು ಸಲ್ಲಿಸಿದಾಗ ಸದರಿ ಅರ್ಜಿಯನ್ನು ತಿರಸ್ಕರಿಸಿರುತ್ತಾರಾ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಎಲ್ಲಿಯೂ ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಎಂದು ನುಡಿಯುತ್ತಾರೆ. ವರದಕ್ಷಿಣೆ ಕಿರುಕುಳಕ್ಕಾಗಿ ಮಾತ್ರ ನಾನು ನನ್ನ ತವರು ಮನೆಗೆ ಹೋಗಿರುತ್ತೇನೆಯೇ ವಿನಾಃ ಬೇರೆ ಯಾವುದೇ ಕಾರಣದಿಂದ ನಾನು ನನ್ನ ತವರು ಮನೆಗೆ ಹೋಗಿರುವುದಿಲ್ಲವೇ ಎಂಬ ಪ್ರಶ್ನೆಗೆ ಸಾಕ್ಷಿಯು ನನ್ನ ಮೇಲೆ ಅನುಮಾನ ಪಡುತ್ತಿದ್ದರು, ನನಗೆ ಹೊಡೆಯುವುದು ಬೈಯುವುದು ಮಾಡುತ್ತಿದ್ದರು, ಮನೆಯಿಂದ ಆಚೆ ಹಾಕುತ್ತಿದ್ದರು ಎಂದು ನುಡಿಯುತ್ತಾರೆ.

ನಾನು ನನ್ನ ಅರ್ಜಿಯಲ್ಲಿ 2 ನೇ ಅರ್ಜಿದಾರರಿಗೆ ಶಾಲಾ ಶುಲ್ಕಕ್ಕಾಗಿ 01 ಲಕ್ಷ ಹಣ ಬೇಕು ಎಂದು ತಿಳಿಸಿದ್ದು, ಅದಕ್ಕೆ ಸಂಬಂಧಿಸಿದಂತೆ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸಾಕ್ಷಿ ಮುಂದುವರೆದು ಮಗುವಿನ ಶಾಲಾ ಶುಲ್ಕ

ರೂ.80,000/- ಆಗಿದ್ದು, ಮಗುವನ್ನು ಶಾಲೆಗೆ ಕಳುಹಿಸುವ ವೆಚ್ಚ ಮತ್ತು ಶಾಲೆಯಲ್ಲಿರುವ ಇತರೆ ದೈಹಿಕ ಚಟುವಟಿಕೆಗಳಿಗೆ ಸೇರಿಸಲು ಹೆಚ್ಚು ಹಣ ಬೇಕಾಗಿರುತ್ತದೆ ಎಂದು ನುಡಿಯುತ್ತಾರೆ.

ನಾನು ನನ್ನ ಅರ್ಜಿಯಲ್ಲಿ 1 ನೇ ಎದುರುದಾರನಿಗೆ ಕೃಷಿ ಚಟುವಟಿಕೆಯಿಂದ ರೂ.18 ಲಕ್ಷ ಆದಾಯ ಬರುತ್ತದೆ ಎಂದು ತಿಳಿಸಿದ್ದು ಅದು ನಿಮಗೆ ಹೇಗೆ ಗೊತ್ತು ಎಂಬ ಪ್ರಶ್ನೆಗೆ ಸಾಕ್ಷಿಯು 1 ನೇ ಎದುರುದಾರನಿಗೆ ಅಡಿಕೆ ತೋಟವಿದ್ದು, ಹಸುಗಳು ಇರುತ್ತದೆ, ಟ್ರ್ಯಾಕ್ಟರ್ ಇರುತ್ತದೆ, ಎರಡು ಮನೆಗಳು ಇರುತ್ತದೆ, 1 ನೇ ಎದುರುದಾರನು ಬೆಂಗಳೂರಿನಲ್ಲಿ ಕೆಲಸ ನಿರ್ವಹಿಸುತ್ತಿರುತ್ತಾರೆ, ಈ ಎಲ್ಲವುಗಳಿಂದ 1 ನೇ ಎದುರುದಾರನಿಗೆ ವಾರ್ಷಿಕವಾಗಿ ರೂ.18 ಲಕ್ಷ ಆದಾಯ ಇರುತ್ತದೆ ಎಂದು ನಾನು ನನ್ನ ಅರ್ಜಿಯಲ್ಲಿ ತಿಳಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಈಗ ಮೇಲೆ ಹೇಳಿದವುಗಳಿಗೆ ಸಂಬಂಧಿಸಿದಂತೆ ನಿಮ್ಮ ಬಳಿ ಯಾವುದಾದರು ದಾಖಲೆಗಳು ಇವೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ಜಮೀನುಗಳು 1 ನೇ ಎದುರುದಾರನ ತಂದೆಯ ಹೆಸರಿನಲ್ಲಿ ಇರುತ್ತವೆ. ನಾವು ಕೊಡಿಸಿದ ಕಾರು 1 ನೇ ಎದುರುದಾರನ ಹೆಸರಿನಲ್ಲಿ ಇರುತ್ತವೆ. ಟ್ರ್ಯಾಕ್ಟರುಗಳು ಅವರ ಕುಟುಂಬದವರ ಹೆಸರಿನಲ್ಲಿ ಇರುತ್ತವೆ ಎಂದು ನುಡಿಯುತ್ತಾರೆ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.,ರವರು ಕಡೂರು.